# ಆಧಾರ್ ಬಯೋಮೆಟ್ರಿಕ್ ಲಾಕ್-ಅನ್‌ಲಾಕ್ ನಿಮ್ಮ ಕೈಲಿ!




ಆಧಾರ್ ಕಾರ್ಡ್‌ನಲ್ಲಿರುವ ಮಾಹಿತಿಯ ಬಗ್ಗೆ ಆತಂಕವಿದ್ದರೆ ಆಧಾರ್ ಬಯೋಮೆಟ್ರಿಕ್ ಬಳಕೆಯನ್ನು ತಾತ್ಕಾಲಿಕವಾಗಿ ಲಾಕ್ ಮಾಡುವ ಅವಕಾಶವಿದೆ. ಹಾಗೆಯೇ ಅನ್‌ಲಾಕ್ ಮಾಡಬಹುದು.

■ **ಶಶಿಕುಮಾರ್ ಸಿ.**

ದೈನಂದಿನ ಕೆಲಸ ಕಾರ್ಯಗಳಲ್ಲಿ ಹಾಸುಹೊಕ್ಕಾಗಿರುವ ಆಧಾರ್ ಕಾರ್ಡ್ ಇಂದು ಎಲ್ಲರ ಬಳಿಯೂ ಇದ್ದೇ ಇರುತ್ತದೆ. ಗುರುತಿನ ಚೀಟಿಗಳ ಪೈಕಿ ಒಂದಾಗಿರುವ ಆಧಾರ್ ಕಾರ್ಡ್ ಇಲ್ಲದೇ ಸರ್ಕಾರದ ಸೌಲಭ್ಯಗಳನ್ನು ಸಾರ್ವಜನಿಕರು ಪಡೆದುಕೊಳ್ಳಲು ಸಾಧ್ಯವೇ ಇಲ್ಲದಂತಹ ವಾತಾವರಣ ನಿರ್ಮಾಣವಾಗಿದೆ. ಹೀಗಾಗಿ ಆಧಾರ್ ಕಾರ್ಡ್‌ನಲ್ಲಿನ ವೈಯಕ್ತಿಕ ವಿವರಗಳನ್ನು ಲಪಟಾಯಿಸಲು ಹ್ಯಾಕರ್ಸ್‌ಗಳು ಹಾಗೂ ಮಾಹಿತಿ ಖದೀಮರು ಹೊಂಚು ಹಾಕುತ್ತಿರುತ್ತಾರೆ. ಇದನ್ನು ತಡೆಗಟ್ಟಲು ಸಾರ್ವಜನಿಕರು ಬಯೋಮೆಟ್ರಿಕ್ ಮೂಲಕ ಆಧಾರ್‌ನ ಮಾಹಿತಿ ಪಡೆಯುವ ವಿಧಾನವನ್ನು ತಮಗೆ ಬೇಕಾದಾಗ ಲಾಕ್ ಹಾಗೂ ಅನ್‌ಲಾಕ್ ಮಾಡಿಕೊಳ್ಳಬಹುದು.

ಆಧಾರ್ ಕಾರ್ಡ್‌ನಲ್ಲಿ ಸಾರ್ವಜನಿಕರ ಬಯೋಮೆಟ್ರಿಕ್ (ಫೋಟೋ + ಫಿಂಗರ್ ಪ್ರಿಂಟ್ಸ್ + ಐರಿಷ್) ವಿವರ, ಮೊಬೈಲ್ ನಂಬರ್, ವಿಳಾಸ ಇರುತ್ತದೆ. ಬ್ಯಾಂಕ್ ಖಾತೆ ಹಾಗೂ ಪಾನ್‌ಕಾರ್ಡ್‌ಗೂ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿರಲಾಗುತ್ತದೆ. ಇದರ ಡಿಜಿಟಲ್ ಮಾಹಿತಿಯನ್ನು ಪಡೆಯಲು ಬಯೋಮೆಟ್ರಿಕ್ ಅತ್ಯಗತ್ಯ. ಇದಿಲ್ಲದೇ ಮಾಹಿತಿ ಪಡೆಯೋದು ಕಷ್ಟ. ಹೀಗಾಗಿ ಈ ಬಯೋಮೆಟ್ರಿಕ್ ಆಯ್ಕೆಯ ಲಾಕ್ ಹಾಗೂ ಅನ್‌ಲಾಕ್ ವಿಧಾನವು ಜನರ ವೈಯಕ್ತಿಕ ಮಾಹಿತಿಯ ಸುರಕ್ಷತೆಯ ದೃಷ್ಟಿಯಿಂದ ಸದ್ಯ ಮುನ್ನೆಲೆಗೆ ಬಂದಿದೆ.

ಈ ಬಯೋಮೆಟ್ರಿಕ್ ಬಳಕೆಯ ವಿಧಾನವನ್ನು ಅಗತ್ಯವೆನಿಸಿದಾಗ ಆನ್‌ಲೈನ್ ಮೂಲಕ ತೆರೆದು ಲಾಕ್ ಹಾಗೂ ಅನ್‌ಲಾಕ್ ಮಾಡಿಕೊಳ್ಳಬಹುದು. ಅದಕ್ಕಿರುವ ವಿಧಾನ ‘ಎಂಆಧಾರ್’ ಆ್ಯಪ್ ಹಾಗೂ ‘ಯುಐಡಿಎಐ’ (ಯುನಿಕ್ ಐಡೆಂಟಿಫಿಕೇಷನ್ ಅಥಾರಿಟಿ ಆಫ್ ಇಂಡಿಯಾ) (UIDAI) ವೆಬ್‌ಸೈಟ್‌ಗೆ ಲಾಗಿನ್ ಆಗುವುದು.

### ಏನಿದು ಆಧಾರ್ ಕಾರ್ಡ್ ಲಾಕ್?

ಸಾರ್ವಜನಿಕರ ಗೋಪ್ಯತೆ ಮತ್ತು ಭದ್ರತೆಯನ್ನು ಇನ್ನಷ್ಟು ಬಲಪಡಿಸಲು, ಇಡೀ ಆಧಾರ್ ಕಾರ್ಡ್‌ನ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುವ ‘ಯುಐಡಿಎಐ’ ಸಂಸ್ಥೆಯು ಜನರಿಗೆ ಆಧಾರ್ ಬಳಕೆಯನ್ನು ಲಾಕ್ ಮಾಡಲು ಮತ್ತು ಅನ್‌ಲಾಕ್ ಮಾಡಲು ವಿಶಿಷ್ಟವಾದ ಫೀಚರ್ ಪರಿಚಯಿಸಿದೆ. ಜನರು ತಮ್ಮ ಆಧಾರ್ ಲಾಕ್ ಮಾಡಿದ ನಂತರ, ಆಧಾರ್ ಸಂಖ್ಯೆಯನ್ನು ಬಳಸಿಕೊಂಡು ಯಾವುದೇ ಕಾರಣಕ್ಕೂ ದೃಢೀಕರಣವನ್ನು ಮಾಡಲಾಗುವುದಿಲ್ಲ. ಆ ಸಂದರ್ಭದಲ್ಲಿ ದೃಢೀಕರಣವನ್ನು ನಿರ್ವಹಿಸಲು ನಿಮ್ಮ ವರ್ಚುವಲ್ ಐಡಿಯನ್ನು ನೀವು ಬಳಸಬಹುದು.

### ವೆಬ್‌ಸೈಟ್ ಮೂಲಕ ಲಾಕ್-ಅನ್‌ಲಾಕ್

- ಸಾರ್ವಜನಿಕರು ‘ಯುಐಡಿಎಐ’ ವೆಬ್‌ಸೈಟ್ ಅನ್ನು ಮೊದಲು ತೆರೆಯಬೇಕು. ನಂತರ ತಮ್ಮ ಆಧಾರ್ ಸಂಖ್ಯೆ ಮತ್ತು ಪಾಸ್‌ವರ್ಡ್ ಅನ್ನು ನಮೂದಿಸಬೇಕು. ಭದ್ರತಾ ದೃಷ್ಟಿಯಿಂದ ಮತ್ತೊಮ್ಮೆ ಆಧಾರ್ ಸಂಖ್ಯೆಯೊಂದಿಗೆ ಲಿಂಕ್ ಆದ ಮೊಬೈಲ್ ಸಂಖ್ಯೆಗೆ ಒಟಿಪಿ ರವಾನೆಯಾಗುತ್ತದೆ.
- ಮೊಬೈಲ್‌ಗೆ ಬಂದ ಒಟಿಪಿ ಅಥವಾ ಟಿಒಟಿಪಿಯನ್ನು ನಮೂದಿಸಿ ಲಾಗಿನ್ ಆಗಬೇಕು
- ಎಂಆಧಾರ್ ಆಯ್ಕೆಯನ್ನು ಕ್ಲಿಕ್ಕಿಸಿದರೆ ಹಲವಾರು ಸೇವಾ ಆಯ್ಕೆಗಳು ಕಾಣಿಸಿಕೊಳ್ಳುತ್ತವೆ.
- ಆ ಪೈಕಿ ಆಧಾರ್ ಸೇವಾ ಕಾಲಂನಡಿ ಲಾಕ್ / ಅನ್‌ಲಾಕ್ ಬಯೋಮೆಟ್ರಿಕ್ಸ್ ಅನ್ನೋ ಮತ್ತೊಂದು ಆಯ್ಕೆಯು ಕಾಣುತ್ತದೆ. ಅದನ್ನು ಕ್ಲಿಕ್ಕಿಸಬೇಕು.
- ಹಾಗೇ ಕ್ಲಿಕ್ಕಿಸಿದೊಡನೆ ಲಾಕ್ ಅಥವಾ ಅನ್‌ಲಾಕ್ ಮಾಹಿತಿ ತೋರುವ ಮತ್ತೊಂದು ಪುಟವು ತೆರೆದುಕೊಳ್ಳುತ್ತದೆ.
- ಅದರಲ್ಲಿ ಲಾಕ್ ಹಾಗೂ ಅನ್‌ಲಾಕ್ ಮಾಡುವ ಆಯ್ಕೆಗಳು ಕಾಣುತ್ತವೆ.
- ಒಮ್ಮೆ ಆಧಾರ್ ಅನ್ನು ಲಾಕ್ ಮಾಡಿದರೆ ಅದು ಹತ್ತು ನಿಮಿಷಗಳ ಬಳಿಕ ಅಪ್‌ಡೇಟ್ ಆಗುತ್ತದೆ.

### ಆ್ಯಪ್ ಮೂಲಕ ಲಾಕ್

- ಆ್ಯಪ್ ತೆರೆದ ಬಳಿಕ ಬಯೋಮೆಟ್ರಿಕ್ಸ್ ಲಾಕ್ / ಅನ್‌ಲಾಕ್ ಅಧಿಸೂಚನೆಯನ್ನು ಕ್ಲಿಕ್ ಮಾಡಿ.
- ಬಳಿಕ ಪಾಸ್‌ವರ್ಡ್ ಅಥವಾ ಒಟಿಪಿಯು ಆಧಾರ್‌ನೊಂದಿಗೆ ಲಿಂಕ್ ಆದ ಮೊಬೈಲ್ ಸಂಖ್ಯೆಗೆ ಬರುತ್ತದೆ, ಅದನ್ನು ನಮೂದಿಸಿ.
- ಲಾಕ್ / ಅನ್‌ಲಾಕ್ ಆಯ್ಕೆಯು ಕಾಣುತ್ತದೆ. ಅದರಲ್ಲಿ ಲಾಕ್ ಆಯ್ಕೆಯನ್ನು ಕ್ಲಿಕ್ಕಿಸಿದರೆ ಬಯೋಮೆಟ್ರಿಕ್ ಲಾಕ್ ಆಗುತ್ತದೆ. ನಿಮಗೆ ಈಗ ಯಾವುದೇ ವಹಿವಾಟು ಮಾಡಲು ಸಾಧ್ಯವಾಗುವುದಿಲ್ಲ.
- ಬಯೋಮೆಟ್ರಿಕ್ ದೃಢೀಕರಣವನ್ನು ಬಳಸಿಕೊಂಡು ನೀವು ವಹಿವಾಟು ನಡೆಸಬೇಕಾದಾಗ, ನೀವು ಅದೇ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ. ನೀವು ಆ್ಯಪ್‌ಗೆ ಲಾಗ್ ಇನ್ ಆಗಬೇಕು ಮತ್ತು ಬಯೋಮೆಟ್ರಿಕ್ಸ್ ಲಾಕ್ ಅನ್ಲಾಕ್ ಬಯೋಮೆಟ್ರಿಕ್ಸ್ ಅಧಿಸೂಚನೆಯನ್ನು ಕ್ಲಿಕ್ ಮಾಡಬೇಕು. ನಿಮ್ಮ ಪಾಸ್‌ವರ್ಡ್ ಅನ್ನು ಒಮ್ಮೆ ನಮೂದಿಸಿದ ನಂತರ ಬಯೋಮೆಟ್ರಿಕ್ಸ್ ಅನ್‌ಲಾಕ್ ಆಗುತ್ತದೆ. ■